# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ಗುಬ್ಬಿ

## ದಿನಾಂಕಃ02.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು<br>ವರ್ಷ<br>ಕೆಲಸ<br>ವಾಸ್ತವ್ಯ | ರಾಧಮ್ಮ ಬಿನ್ ತೋಪಯ್ಯ<br>44 ವರ್ಷ<br>ವ್ಯವಸಾಯ<br>ಜಕ್ಕಸಂದ್ರ |
| | **ಸತ್ಯ ಪ್ರತಿಜ್ಞೆಯ ಮೇರೆಗೆ** |

**ಪಾಟೀ ಸವಾಲುಃ- ವಾದಿಗಳ ಪರ ವಕೀಲರಾದ ಶ್ರೀ. ಎಸ್.ಆರ್.ರವರಿಂದ**

ನನ್ನ ತಂದೆಯ ಹೆಸರು ತೋಪಯ್ಯ. ದಾವಾ ಸ್ವತ್ತಿನ ಸ.ನಂಃ 45 /2 ಇರುತ್ತದೆ ಅದರ ಒಟ್ಟು ವಿಸ್ತೀರ್ಣ 2 ಎಕರೆ ಇರುತ್ತದೆ. ದಾವಾಸ್ವತ್ತು ಮೂಲತಃ ನನ್ನ ತಾಯಿಗೆ ಸೇರಿದ್ದು . ನನ್ನ ತಂದೆ ತೋಪಯ್ಯ ದಿಃ09-04-1957 ರಂದು ಹೊನ್ನೇಗೌಡರಿಂದ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ಖರೀದಿ ಮಾಡಿದಾಗಿನಿಂದಲೂ ದಾವಾಸ್ವತ್ತಿನಲ್ಲಿ ನನ್ನ ತಂದೆಯೇ ಸ್ವಾಧೀನಾನುಭವದಲ್ಲಿ ಇದ್ದರು ಎಂದರೆ ಸರಿಯಲ್ಲ. ದಾವಾಸ್ವತ್ತು ನನ್ನ ತಾಯಿ ಜಯಮ್ಮಳಿಗೆ ಅವಳ ಅಣ್ಣ ವೆಂಕಟರಂಗಯ್ಯನ ಕಡೆಯಿಂದ ಬಂದಿತ್ತು. ಆ ರೀತಿ ದಾವಾಸ್ವತ್ತು ನನ್ನ ತಾಯಿಗೆ ಅವಳ ಅಣ್ಣನಿಂದ ಬಂತು ಎಂದು ಹೇಳಲು ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ನನ್ನ ತಾಯಿ ಹಾಗೂ ಸದರಿ ವೆಂಕಟರಗಯ್ಯನ ವಿರುದ್ಧ ತುಮಕೂರು ನ್ಯಾಯಾಲಯದಲ್ಲಿ ಓ.ಎಸ್.524/12 ರಂತೆ ಭಾಗಾಂಶ ಕೋರಿ ದಾವೆ ಹಾಕಿದ್ದೆ ಎಂದರೆ ಸರಿ. ಆ ದಾವೆಯಲ್ಲಿ ಈ ದಾವಾಸ್ವತ್ತನ್ನು ಮಾತ್ರ ಸೇರಿಸಿದ್ದೆ ಇನ್ನ್ಯಾವುದೇ ಸ್ವತ್ತುಗಳನ್ನು ಸೇರಿಸಿಲ್ಲ. ನಾನು ಸದರಿ ದಾವೆಯಲ್ಲಿ ಸ.ನಂಃ22/1 ಎ 32 ಗುಂಟೆ ಹಾಗೂ ಸ.ನಂಃ11/2 ,1 ಎಕರೆ ಜಮೀನಿನಲ್ಲಿ ಭಾಗಾಂಶ ಕೇಳಿ ದಾವೆ ಸಲ್ಲಿಸಿದ್ದೆ ಎಂದರೆ ಸರಿಯಲ್ಲ.

2. ನನ್ನ ತಂದೆಗೆ ಇಬ್ಬರು ಹೆಂಡತಿಯರು ಮೊದಲನೇ ಹೆಂಡತಿ ಗಂಗಮ್ಮ ಳಿಗೆ ಇಬ್ಬರುಹೆಣ್ಣು ಮಕ್ಕಳು, ಒಬ್ಬನೇ ಮಗ ರಾಮಣ್ಣ. ನಾನು ಓ.ಎಸ್.524/12 ರಲ್ಲಿ ಗಂಗಮ್ಮಳ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನಾನು ನನ್ನ ತಾಯಿ ಶರೀಕಾಗಿ ಆ ದಾವೆಯಲ್ಲಿ ದಾವಾಸ್ವತ್ತನ್ನು ಸೇರಿಸಿ ಕೊಲೀಸಿವ್ ಡಿಕ್ರಿ ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ಈ ವಿಷಯವು ನಾನು ಓ.ಎಸ್.524/12 ರಲ್ಲಿ ಕೊಲೀಸಿವ್ ಡಿಕ್ರಿ ಪಡೆದ ವಿಚಾರ ವಾದಿಗೆ ನಾನು ಈ ದಾವೆ ಹಾಕಿದನಂತರ ಗೊತ್ತಾಗಿರುತತದೆ ಎಂದರೆ ಸಾಕ್ಷಿ ಏನೂ ಉತ್ತರ ಕೊಡದೇ ನಿಂತಿರುತ್ತಾರೆ. ದಾವಾಸ್ವತ್ತು ತೋಪಯ್ಯನ ಸ್ವಯಾರ್ಜಿತ ಆಸ್ತಿಯಾಗಿದ್ದು ಅದರಲ್ಲಿ ವಾದಿ ಮತ್ತು ಪ್ರತಿವಾದಿ ಗೂ ಸಹ ಭಾಗ ಇದೆ ಎಂದರೆ ಸರಿಯಲ್ಲ. ಇವತ್ತಿಗೂ ಸಹ ದಾವಾಸ್ವತ್ತಿನಲ್ಲಿ ವಾದಿ ಹಾಗೂ ಪ್ರತಿವಾದಿಗಳು ಜಂಟೀ ಸ್ವಾಧೀನದಲ್ಲಿ ಇದ್ದಾರೆಎಂದರೆ ಸರಿಯಲ್ಲ. ನನಗೂ, ವಾದಿಗೂ ಹಾಗೂ ಇತರೆ ಪ್ರತಿವಾದಿಗಳಿಗೂ ದಾವಾಸ್ವತ್ತಿನಲ್ಲಿ ಸಮನಾದ ಹಕ್ಕು ಮತ್ತು ಭಾಗಾಂಶ ಇದೆಎಂದರೆ ಸರಿಯಲ್ಲ. ನಾನು ನನ್ನ ಹೆಸರಿಗೆ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ದಾವಾಸ್ವತ್ತನ್ನು ಮಾರಾಟ ಮಾಡಲು ಪ್ರಯತ್ನಪಟ್ಟೆಎಂದರೆ ಸರಿಯಲ್ಲ. ನಾನು ದಾವಾಸ್ವತ್ತನ್ನುಮಾರಾಟ ಮಾಡಲು ಪ್ರಯತ್ನ ಪಟ್ಟಾಗ್ಗ ವಾದಿ ದಾವಾಸ್ವತ್ತಿನಲ್ಲಿ ಭಾಗಾಂಶ ಕೋರಿ ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ.

3. ವೆಂಕಟಯ್ಯನಿಗೆ ಗಂಡು ಮಕ್ಕಳಿರಲಿಲ್ಲ ಎಂದರೆ ಸರಿ. ವೆಂಕಟಯ್ಯನ ತಾಯಿ ಗಂಗಮ್ಮ ಎಂದರೆ ಸರಿ. ಸ.ನಂಃ11/2 1 ಎಕರೆ ಜಮೀನು , ಸ.ನಂಃ58/2 38 ಗುಂಟೆಜಮೀನು ಮತ್ತು ಇನ್ನೊಂದು 30 ಗುಂಟೆ ಜಮೀನು ವೆಂಕಟಯ್ಯನಿಗೆ ಸೇರಿದ್ದು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ತೋಪಯ್ಯನನ್ನು ವೆಂಕಟಯ್ಯ ಎನ್ನುವವರು ದತ್ತು ಮಗನಾಗಿ ಸ್ವೀಕರಿಸಿದ್ದರು ಎಂದರೆ ಸರಿ. ವೆಂಕಟಯ್ಯ ನನ್ನ ತಂದೆಯನ್ನುಸಾಕಿ ಸಲುಹಿ ಅವರ ಮಗಳಾದ ಗಂಗಮ್ಮಳನ್ನು ಕೊಟ್ಟು ನನ್ನ ತಂದೆ ತೋಪಯ್ಯನಿಗೆ ವಿವಾಹ ಮಾಡಿಕೊಟ್ಟಿದ್ದರು ಎಂದರೆ ಸರಿ. ಗಂಗಮ್ಮಳ ತಂದೆ ವೆಂಕಟಯ್ಯನ ಜಮೀನುಗಳನ್ನು ಸದರಿ ಗಂಗಮ್ಮಳೇ ಅನುಭವಿಸಿಕೊಂಡು ಬರುತ್ತಿದ್ದಳು ಎಂದರೆ ಸರಿ. ಗಂಗಮ್ಮಮೃತಪಟ್ಟ ನಂತರ ವೆಂಕಟಯ್ಯನ ಸ್ವತ್ತುಗಳು ವಾದಿ ಹಾಗೂ ಗಂಗಮ್ಮಳ ಪಾಲಿಗೆ ಹೋಯಿತು ಎಂದರೆ ನನಗೆ ಗೊತ್ತಿಲ್ಲ.

4. ಸ.ನಂ:11/2, ಸ.ನಂ:58/2 ಮತ್ತು 30 ಗುಂಟೆ ಜಮೀನು ಗಂಗಮ್ಮಳ ಸ್ತ್ರೀಧನ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ. ವಾದಿಗೆ ದಾವಾಸ್ವತ್ತಿನಲ್ಲಿ ಭಾಗಾಂ ಶ ಕೊಡಬಾರದು ಎಂದು ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.

ಓ . ಹೇ. ಕೇ. ಸರಿ. ಇದೆ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ.